ಪ್ರಕೃತಿಯೊಂದಿಗೆ ಜಗಳವಾಡುತ್ತಲೇ ಇರುತ್ತದೆ. ಒಬ್ಬರ ಸ್ವಭಾವ ಮತ್ತೊಬ್ಬರ ಸ್ವಭಾವದೊಂದಿಗೆ ಹೊಂದಾಣಿಕೆಯಾಗದೆ ಜಗಳವಾಗುತ್ತಲೇ ಇರುತ್ತದೆ.

## 'Counter-Pulley'ಯ ಕೌಶಲ್ಯ

ನಾವು ನಮ್ಮ ಅಭಿಪ್ರಾಯವನ್ನು ಮೊದಲೇ ಹೇಳಲು ಹೋಗಬಾರದು. ಮೊದಲು ಎದುರಿನವರನ್ನು ಕೇಳಬೇಕು, 'ನಿಮಗೆ ಈ ವಿಷಯದ ಬಗ್ಗೆ ಏನನ್ನಿಸುತ್ತದೆ?', ನಂತರ ಎದುರಿನವರು ಅವರ ವಿಚಾರವನ್ನೇ ಪಟ್ಟುಹಿಡಿದರೆ ನಾವು ನಮ್ಮದನ್ನು ಬಿಟ್ಟುಬಿಡಬೇಕು. ನಾವು ಇಲ್ಲಿ ನೋಡಿಕೊಳ್ಳಬೇಕಾಗಿರುವುದು ಏನೆಂದರೆ, ಅವರಿಗೆ ನಮ್ಮಿಂದ ಯಾವ ರೀತಿಯಿಂದಲೂ ದುಃಖವಾಗಬಾರದು. ನಮ್ಮ ಅಭಿಪ್ರಾಯದಿಂದ ಅವರಿಗೆ ಒತ್ತಾಯಪಡಿಸಬಾರದು. ಅವರ ಅಭಿಪ್ರಾಯವನ್ನು ನಾವು ಸ್ವೀಕರಿಸಿಬಿಡಬೇಕು. ನಾವಂತೂ (ದಾದಾಶ್ರೀ) ಎಲ್ಲರ ಅಭಿಪ್ರಾಯಗಳನ್ನು ಅಂಗೀಕರಿಸಿ 'ಜ್ಞಾನಿ'ಯಾಗಿ ಬಿಟ್ಟಿದ್ದೇವೆ. ನಾನು, ನನ್ನ ಅಭಿಪ್ರಾಯವನ್ನು ಒಪ್ಪುವಂತೆ ಯಾರಿಗಾದರು ಒತ್ತಾಯಪಡಿಸಿದರೆ, ಆಗ ನಾನೇ ಪಕ್ವವಾಗಿಲ್ಲವೆಂದಾಗುತ್ತದೆ. ನಮ್ಮ ಅಭಿಪ್ರಾಯದಿಂದ ಯಾರಿಗೂ ದುಃಖವಾಗದಂತೆ ನೋಡಿಕೊಳ್ಳಬೇಕು.

ನಿಮ್ಮ 'ರೆವೊಲ್ಯೂಷನ್'ನ ವೇಗವು 1800 ಇದ್ದರೆ, ಎದುರಿನವನ 'ರೆವೊಲ್ಯೂಷನ್'ನ ವೇಗವು 600 ಆಗಿರುವಾಗ, ನಾವು ನಮ್ಮ ಅಭಿಪ್ರಾಯವನ್ನು ಅವರ ಮೇಲೆ ಹೊರಿಸಿದರೆ, ಅವರ 'ಎಂಜಿನ್' ಮುರಿದುಬೀಳುವುದಲ್ಲದೆ ನಂತರ ಅವರ ಎಲ್ಲಾ ಬಿಡಿ-ಬಾಗಗಳನ್ನು ಬದಲಿಸಬೇಕಾಗುತ್ತದೆ.

**ಪ್ರಶ್ನಕರ್ತ:** 'ರೆವೊಲ್ಯೂಷನ್' ಅಂದರೆ ಏನು?

**ದಾದಾಶ್ರೀ:** ಈ ವಿಚಾರಮಾಡುವ ಶಕ್ತಿ ಇದೆಯಲ್ಲ, ಅದು. ಪ್ರತಿಯೊಬ್ಬರಲ್ಲೂ ವಿಭಿನ್ನವಾಗಿರುತ್ತದೆ. ಏನಾದರು ಮಾಡಬೇಕೆಂದಿದ್ದರೆ, ಆಗ ಒಂದು ನಿಮಿಷದಲ್ಲಿ ಎಷ್ಟೊಂದು ವಿಚಾರಗಳು ಬರುತ್ತವೆ, ಅದರ ಎಲ್ಲಾ ಪರ್ಯಾಯಗಳನ್ನು 'ಅಟ್ ಏ ಟೈಮ್ ' ತೋರಿಸುತ್ತದೆ. ಈ ದೊಡ್ಡ ದೊಡ್ಡ ವ್ಯಕ್ತಿಗಳಿಗೆ ನಿಮಿಷಕ್ಕೆ 'ರೆವೊಲ್ಯೂಷನ್'

## ಅಳವಡಿಸಿ ಜ್ಞಾನಿಗಳ ಜ್ಞಾನದ ಕಲೆಯನ್ನು

ಯಾವತ್ತೋ ಒಂದು ದಿನ ರಾತ್ರಿ ಹೆಂಡತಿ ಕೇಳುತ್ತಾಳೆ, 'ನನಗೆ ಅಂದು ನೋಡಿದ ಸೀರೆಯನ್ನು ಕೊಡಿಸುವುದಿಲ್ಲವೆ? ನನಗೆ ಆ ಸೀರೆಯನ್ನು ತೆಗೆದುಕೊಳ್ಳಲೇಬೇಕು'. ಅವನು ಕೇಳುತ್ತಾನೆ 'ಅದರ ಬೆಲೆ ಎಷ್ಟು?' ಎಂದು. ಅದಕ್ಕೆ ಅವಳು ಹೇಳುತ್ತಾಳೆ, 'ಹೆಚ್ಚೇನಿಲ್ಲ, 2200 ರೂಪಾಯಿಗಳಾಗುತ್ತದೆ'. ಆಗ ಅವನು, 'ನಿನಗೆ ಅದು ಕಡಿಮೆ ಅನ್ನಿಸಬಹುದು, ಆದರೆ ನಾನು ಅಷ್ಟು ದುಡ್ಡು ಎಲ್ಲಿಂದ ತರಲಿ?' ಎಂದು ಹೇಳುತ್ತಾನೆ. ಆಗಲೇ ಅಲ್ಲಿ ಕೊಂಡಿಯು ಸಡಿಲವಾಗುತ್ತದೆ. 'ಇನ್ನೂರೋ, ಮುನ್ನೂರೋ ಆಗಿದ್ದರೆ ತಂದುಕೊಡುತ್ತಿದೆ. ಆದರೆ ನೀನು 2200 ರೂಪಾಯಿಗಳು ಎಂದು ಹೇಳುತ್ತಿರುವೆ!' ಎಂದಾಗ, ಇದನ್ನು ಕೇಳಿ ಅವಳು ಸಿಟ್ಟುಮಾಡಿಕೊಂಡು ಕುಳಿತುಬಿಡುತ್ತಾಳೆ. ಈಗ ಅವನ ಸ್ಥಿತಿ ಏನಾಗಬೇಕು? ಮನಸ್ಸಿನಲ್ಲೇ ಅನ್ನಿಸುತ್ತದೆ ಕೈ ಸುಟ್ಟುಕೊಂಡೆ ಇದಕ್ಕಿಂತ ಮದುವೆಯಾಗದೆ ಇದಿದ್ದರೆ ಒಳಿತಾಗಿತ್ತು! ಆದರೆ, ಮದುವೆಯಾದ ಮೇಲೆ ಪಶ್ಚಾತ್ತಾಪ ಪಟ್ಟರೆ ಪ್ರಯೋಜನವಾದರೂ ಏನು? ಆದ್ದರಿಂದಲೇ ಇಂತಹ ದುಃಖಗಳು.

**ಪ್ರಶ್ನಕರ್ತ:** ನೀವು ಹೇಳುವುದೇನೆಂದರೆ, ಹೆಂಡತಿಗೆ 2200 ರೂಪಾಯಿಯ ಸೀರೆಯನ್ನು ತಂದುಕೊಡಬೇಕೆಂದು?

**ದಾದಾಶ್ರೀ:** ತಂದುಕೊಡುವುದು ಬಿಡುವುದು ಅದು ನಿಮಗೆ ಬಿಟ್ಟಿದ್ದು. ಅವಳು ಸಿಟ್ಟುಮಾಡಿಕೊಂಡು ಪ್ರತಿದಿನ ರಾತ್ರಿ 'ಅಡಿಗೆ ಮಾಡುವುದಿಲ್ಲವೆಂದು' ಹೇಳುತ್ತಾಳೆ. ಆಗ ನಾವೇನು ಮಾಡಬೇಕು? ಎಲ್ಲಿಂದ ಅಡಿಗೆಯವನನ್ನು ತರುವುದು? ಹಾಗಾಗಿ, ಸಾಲ ಮಾಡಿಯಾದರೂ ಸೀರೆ ತಂದುಕೊಡಬೇಕಾಗುತ್ತದೆ ಅಲ್ಲವೇ?

ನೀವು ಹೀಗೊಂದು ಉಪಾಯ ಮಾಡಿದರೆ, ಆಗ ಅವಳು ಆ ಸೀರೆಯನ್ನು ತರಲುಹೋಗುವುದೇ ಇಲ್ಲ. ನಿಮ್ಮ ತಿಂಗಳ ಸಂಬಳ ಎಂಟು ಸಾವಿರವಾಗಿದ್ದರೆ, ಅದರಿಂದ ಒಂದು ಸಾವಿರವನ್ನು ನಿಮ್ಮ ಖರ್ಚಿಗೆ ತೆಗೆದಿಟ್ಟುಕೊಂಡು, ಉಳಿದ ಏಳು ಸಾವಿರವನ್ನು ಅವಳಿಗೆ ಕೊಟ್ಟುಬಿಟ್ಟರೆ ಮತ್ತೆ ಅವಳು ನಿಮ್ಮನ್ನು ಸೀರೆ ತಂದುಕೊಡಲು ಕೇಳುತ್ತಾಳೆಯೇ? ಆಮೇಲೆ ಯಾವತ್ತೋ ಒಂದು ದಿನ, ನೀವೇ ತಮಾಷೆಗೆ ಕೇಳಿ,

## ನವ್-ಕಲಮೊ (ಒಂಬತ್ತು ಸೂತ್ರಗಳು)

**1.** ಹೇ ದಾದಾ ಭಗವಾನ್! ನಾನು ಯಾವುದೇ ದೇಹಧಾರಿ ಜೀವಾತ್ಮದ 'ಅಹಂ'ಗೆ ಕಿಂಚಿತ್ತೂ ಕೂಡಾ ನೋವನ್ನು ಉಂಟುಮಾಡದೆ, ಮಾಡಿಸದೆ, ಅಥವಾ ಮಾಡುವುದಕ್ಕೆ ಅನುಮೋದಿಸದೆ ಇರುವಂತೆ ಪರಮ ಶಕ್ತಿ ನೀಡಿ.

ನಾನು ಯಾವುದೇ ದೇಹಧಾರಿ ಜೀವಾತ್ಮದ 'ಅಹಂ'ಗೆ ಕಿಂಚಿತ್ತೂ ಕೂಡಾ ನೋವನ್ನು ಉಂಟುಮಾಡದೆ ಇರುವಂತಹ ಸ್ಯಾದ್ವಾದ್ (ಆತ್ಮಜಾಗೃತಿಯೊಂದಿಗೆ, ನಿರ್ದೋಷದ ದೃಷ್ಟಿಯಿಂದ ಮತ್ತು ಎಲ್ಲರಿಗೂ ಸಮಾಧಾನವಾಗುವಂತಹ) ವಾಣಿ, ಸ್ಯಾದ್ವಾದ್ ವರ್ತನೆ ಹಾಗೂ ಸ್ಯಾದ್ವಾದ್ ಮನನ ಮಾಡುವಂತೆ ಪರಮ ಶಕ್ತಿ ನೀಡಿ.

**2.** ಹೇ ದಾದಾ ಭಗವಾನ್! ನಾನು ಯಾವುದೇ ಧರ್ಮದ ಪ್ರಮಾಣಕ್ಕೆ ಕಿಂಚಿತ್ತೂ ಕೂಡಾ ನೋವನ್ನು ಉಂಟುಮಾಡದೆ, ಮಾಡಿಸದೆ, ಅಥವಾ ಮಾಡುವುದಕ್ಕೆ ಅನುಮೋದಿಸದೆ ಇರುವಂತೆ ಪರಮ ಶಕ್ತಿ ನೀಡಿ.

ನಾನು ಯಾವುದೇ ಧರ್ಮದ ಪ್ರಮಾಣಕ್ಕೆ ಕಿಂಚಿತ್ತೂ ಕೂಡಾ ನೋವನ್ನು ಉಂಟುಮಾಡದೆ ಇರುವಂತಹ ಸ್ಯಾದ್ವಾದ್ (ಆತ್ಮಜಾಗೃತಿಯೊಂದಿಗೆ, ನಿರ್ದೋಷದ ದೃಷ್ಟಿಯಿಂದ ಮತ್ತು ಎಲ್ಲರಿಗೂ ಸಮಾಧಾನವಾಗುವಂತಹ) ವಾಣಿ, ಸ್ಯಾದ್ವಾದ್ ವರ್ತನೆ ಹಾಗೂ ಸ್ಯಾದ್ವಾದ್ ಮನನ ಮಾಡುವಂತೆ ಪರಮ ಶಕ್ತಿ ನೀಡಿ.

**3.** ಹೇ ದಾದಾ ಭಗವಾನ್! ನಾನು ಯಾರೇ ದೇಹಧಾರಿ ಉಪದೇಶಕರು, ಸಾಧು, ಸಾಧ್ವಿ ಅಥವಾ ಆಚಾರ್ಯರ ಅವಹೇಳನ, ಅಪರಾಧ, ಅವಿನಯವನ್ನು ಮಾಡದೆ ಇರುವಂತೆ ಪರಮ ಶಕ್ತಿ ನೀಡಿ.

**4.** ಹೇ ದಾದಾ ಭಗವಾನ್! ನಾನು ಯಾವುದೇ ದೇಹಧಾರಿ ಜೀವಾತ್ಮದೊಂದಿಗೆ ಕಿಂಚಿತ್ತೂ ಕೂಡಾ ಅಭಾವ, ತಿರಸ್ಕಾರವನ್ನು ಎಂದಿಗೂ ಮಾಡದೆ, ಮಾಡಿಸದೆ ಅಥವಾ ಮಾಡುವುದಕ್ಕೆ ಅನುಮೋದಿಸದೆ ಇರುವಂತೆ ಪರಮ ಶಕ್ತಿ ನೀಡಿ.

**5.** ಹೇ ದಾದಾ ಭಗವಾನ್! ನಾನು ಯಾವುದೇ ದೇಹಧಾರಿ ಜೀವಾತ್ಮದೊಂದಿಗೆ ಎಂದಿಗೂ ಕಠೋರ ಭಾಷೆ, ವ್ಯಂಗ್ಯ ಭಾಷೆಯನ್ನು ಮಾತನಾಡದೆ, ಮಾತನಾಡಿಸದೆ, ಮಾತನಾಡುವುದಕ್ಕೆ ಅನುಮೋದಿಸದೆ ಇರುವಂತೆ ಪರಮ ಶಕ್ತಿ ನೀಡಿ.

ಯಾರೇ ಕಠೋರವಾಗಿ, ವ್ಯಂಗ್ಯವಾಗಿ ಮಾತನಾಡಿದರೂ, ನಾನು ಮೃದು-ಋಜು ಭಾಷೆಯನ್ನು ಮಾತನಾಡುವಂತೆ ಪರಮ ಶಕ್ತಿ ನೀಡಿ.

**6.** ಹೇ ದಾದಾ ಭಗವಾನ್! ನಾನು ಯಾವುದೇ ದೇಹಧಾರಿ ಜೀವಾತ್ಮದೊಂದಿಗೆ ಸ್ತ್ರೀ, ಪುರುಷ, ಅಥವಾ ನಪುಂಸಕ, ಯಾವುದೇ ಲಿಂಗಧಾರಿಯಾಗಿರಲಿ, ಅವರ ಬಗ್ಗೆ, ಕಿಂಚಿತ್ತೂ ಕೂಡಾ ವಿಷಯ-ವಿಕಾರಕ್ಕೆ ಸಂಬಂಧಪಟ್ಟ ದೋಷಗಳು, ಇಚ್ಛೆಗಳು, ಚೇಷ್ಟೆಗಳು ಅಥವಾ ವಿಚಾರಕ್ಕೆ ಸಂಬಂಧಪಟ್ಟ ದೋಷಗಳನ್ನು ಮಾಡದೆ, ಮಾಡಿಸದೆ ಅಥವಾ ಮಾಡುವುದಕ್ಕೆ ಅನುಮೋದಿಸದೆ ಇರುವಂತೆ ಪರಮ ಶಕ್ತಿ ನೀಡಿ.

ನಾನು ನಿರಂತರ ನಿರ್ವಿಕಾರಿಯಾಗಿರಲು ಪರಮ ಶಕ್ತಿ ನೀಡಿ.

**7.** ಹೇ ದಾದಾ ಭಗವಾನ್! ನಾನು ಯಾವುದೇ ರಸದಲ್ಲಿ ಲುಬ್ಧನಾಗದೇ ಇರುವಂತೆ ಪರಮ ಶಕ್ತಿ ನೀಡಿ.

ಸಮರಸಿ (ಷಡ್ರಸಗಳ) ಆಹಾರವನ್ನು ಸೇವಿಸುವಂತೆ ಪರಮ ಶಕ್ತಿ ನೀಡಿ.

**8.** ಹೇ ದಾದಾ ಭಗವಾನ್! ನಾನು ಯಾವುದೇ ದೇಹಧಾರಿ ಜೀವಾತ್ಮಕ್ಕೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ, ಜೀವಂತ ಅಥವಾ ಮೃತ್ಯು ಹೊಂದಿರುವ, ಯಾವುದಕ್ಕೂ ಕಿಂಚಿತ್ತೂ ಕೂಡಾ ಅವಹೇಳನ, ಅಪರಾಧ ಅವಿನಯವನ್ನು ಮಾಡದೆ, ಮಾಡಿಸದೆ ಅಥವಾ ಮಾಡಿಸುವುದಕ್ಕೆ ಅನುಮೋದಿಸದೆ ಇರುವಂತೆ ಪರಮ ಶಕ್ತಿ ನೀಡಿ.

**9.** ಹೇ ದಾದಾ ಭಗವಾನ್! ನಾನು ಜಗತ್-ಕಲ್ಯಾಣವನ್ನು ಮಾಡಲು ನಿಮಿತ್ತನಾಗುವಂತೆ ಪರಮ ಶಕ್ತಿ ನೀಡಿ, ಶಕ್ತಿ ನೀಡಿ, ಶಕ್ತಿ ನೀಡಿ.

*********

## ಸಂಪರ್ಕಿಸಿ


ದಾದಾ ಭಗವಾನ್ ಪರಿವಾರ

**ಅಡಾಲಜ್:** ತ್ರಿಮಂದಿರ್ ಸಂಕುಲ್, ಸಿಮಂಧರ್ ಸಿಟಿ, ಅಹಮದಾಬಾದ್–ಕಲೋಲ್ ಹೈವೇ, ಪೋಸ್ಟ್: ಅಡಾಲಜ್, ಜಿ.–ಗಾಂಧೀನಗರ್, ಗುಜರಾತ್ –382421. ಫೋನ್: (079) 39830100,

**Email: info@dadabhagwan.org**

**ಕರ್ನಾಟಕ:**

ಬೆಂಗಳೂರು: 9590979099 ಹುಬ್ಬಳ್ಳಿ: 9513216111

ಬೆಳಗಾವಿ: 9945894202

| | | | |
|---|---|---|---|
| **ಮುಂಬೈ**: | 9323528901 | **ಹೈದರಾಬಾದ್**: | 9989877786 |
| **ದೆಹಲಿ**: | 9810098564 | **ಚೆನ್ನೈ**: | 9380159957 |
| **ಪೂನಾ**: | 9422660497 | **ಜಬಲ್ಪುರ:** | 9425160428 |
| **ಜಯಪುರ**: | 9351408285 | **ಅಮರಾವತಿ**: | 9422915064 |
| **ಭೂಪಾಲ**: | 9425024405 | **ಬಿಲಾಯ್**: | 9827481336 |
| **ಇಂದೋರ್**: | 9893545351 | **ಪಟ್ನಾ**: | 9431015601 |
| **ಕೊಲ್ಕತ್ತಾ:** | 033–32933885 | | |

| | | | |
|---|---|---|---|
| **USA:** | +1877-505-(3232) | **Australia:** | +61 421127947 |
| **UK:** | +44330-111-(3232) | **New Zealand:** | +64210376434 |
| **Kenya:** | +254772722063 | **Singapore:** | +6581129229 |
| **UAE:** | +971557316937 | | |

**Website: www.dadabhagwan.org**

